ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

CC. 464/2016

CW- 02

PW- 02

ಪ್ರಮಾಣ ವಚನ ಬೋಧಿಸಿದ ದಿನಾಂಕ 19-06-2023

| | | |
|---|---|---|
| ಹೆಸರು ಶ್ರೀ / ಶ್ರೀಮತಿ | :- | ರುದ್ರಪ್ಪ |
| ತಂದೆ / ಗಂಡನ ಹೆಸರು | :- | ಈರಪ್ಪ |
| ವಯಸ್ಸು | :- | 58 ವರ್ಷ |
| ಉದ್ಯೋಗ | :- | ವ್ಯವಸಾಯ |
| ವಾಸ ಸ್ಥಳ | :- | ಗಂಜೀನಹಳ್ಳಿ ಗ್ರಾಮ |

ಮುಖ್ಯ ವಿಚಾರಣೆ:- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.

ಸುಮಾರು 16-17 ನೇ ಸಾಲಿನಲ್ಲಿ ಚಾಸಾ-1 ರವರಿಗೆ ಸೇರಿದ ಜಾಗದಲ್ಲಿ ಅಡಿಕೆ ಕಳ್ಳತನವಾದ ಬಗ್ಗೆ ಪೊಲೀಸಿನವರು ಸ್ಥಳಕ್ಕೆ ಬಂದು ನನ್ನನ್ನು ಮತ್ತು ಚಾಸಾ-3 ರವರು ಸ್ಥಳಕ್ಕೆ ಕರಿಸಿ ನಮ್ಮ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಆ ಸಮಯದಲ್ಲಿ ನಾನು ಚಾಸಾ-1 ಮತ್ತು 3, ಪೊಲೀಸರು ಮತ್ತು ನ್ಯಾಯಾಲಯದ ಮುಂದಿರುವ 5 ಜನ ಆರೋಪಿತರು ಹಾಜರಿದ್ದರು. ಬೆಳಗ್ಗೆ 10-00 ರಿಂದ 11-00 ಗಂಟೆ ಸಮಯದಲ್ಲಿ ಪೊಲೀಸಿನವರು ಮಹಜರ್ ಕ್ರಮ ಜರುಗಿಸಿ, ಮಹಜರ್ ನಲ್ಲಿ ಬರೆದಿರುವ ಎಲ್ಲಾ ವಿಚಾರಗಳನ್ನು ಓದಿ ಹೇಳಿ ನನ್ನ ಮತ್ತು ಚಾಸಾ-3 ರವರ ಸಹಿಗಳನ್ನು ಪೊಲೀಸರು ಪಡೆದುಕೊಂಡು ಸ್ಥಳದಲ್ಲಿ ಆರೋಪಿತರೊಂದಿಗೆ ನಮ್ಮ ಭಾವಚಿತ್ರವನ್ನು ತೆಗೆದಿರುತ್ತಾರೆ. ಮಹಜರ್ ಈಗಾಗಲೇ ನಿಪಿ-4 ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಮಹಜರ್ ಮಾಡುವ ಸಮಯದಲ್ಲಿ ತೆಗೆದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು. ಪೊಲೀಸಿನವರು ಆರೋಪಿತರನ್ನು ಘಟನಾ ಸ್ಥಳಕ್ಕೆ ಅಡಿಕೆ ಕಳ್ಳತನ ಮಾಡಿರುವ ವಿಚಾರಕ್ಕೆ ಕರೆದುಕೊಂಡು ಬಂದಿರುತ್ತಾರೆ.

<u>ಪಾಟೀಸವಾಲು:-</u> ಆರೋಪಿತರ ಪರ ವಕೀಲರಿಂದ.

ಚಾಸಾ-1 ರವರು ತಿಳಿಸಿದ ಮೇರೆಗೆ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಮತ್ತು ಚಾಸಾ-1 ರವರು ವಿಶ್ವಾಸ ಮತ್ತು ಅನ್ಯೋನ್ಯವಾಗಿದ್ದೇವು ಎಂದರೆ ಸರಿ. ನಾನು ಚಾಸಾ-1 ರವರ ಜಮೀನಿನಲ್ಲಿ ಕೂಲಿ ಕೆಲಸ ಮಾಡಲು ಹೋಗುತ್ತಿದ್ದೆ. ನಿಪಿ-4 ರಲ್ಲಿ ಪೊಲೀಸಿನವರು 8 ಅಡಿಕೆ ಚೀಲ ಕಳ್ಳತನವಾಗಿದೆ ಎಂದು ನಿಪಿ-4 ರಲ್ಲಿ ನಮೂದು ಮಾಡಿದ್ದಾರೆ. ನಿಪಿ-4 ರಲ್ಲಿ ಯಾವ ತರಹದ ಅಡಿಕೆ ಕಳ್ಳತನವಾಗಿದೆ ಎಂದು ಪೊಲೀಸರು ನಮೂದು ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ-1 ರವರಿಗೆ ಸೇರಿದ ಜಾಗದ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಸ್ಥಳದ ಚೆಕ್ಕುಬಂಧಿ ಉತ್ತರ ಮತ್ತು ದಕ್ಷಿಣಕ್ಕೆ ಚಾಸಾ-1 ರವರಿಗೆ ಸೇರಿದ ಖಾಲಿ ಜಾಗ, ಪೂರ್ವ ಮತ್ತು ಪಶ್ಚಿಮಕ್ಕೆ ಚಾಸಾ-1 ರವರಿಗೆ ಸೇರಿದ ಮನೆ. ಸ್ಥಳ ಮಹಜರ್ ಸಮಯದಲ್ಲಿ ನಮ್ಮನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಪೊಲೀಸಿನವರು ಘಟನಾ ಸ್ಥಳದಲ್ಲಿ ನಿಪಿ-2 ಮತ್ತು 3 ಭಾವಚಿತ್ರವನ್ನು ತೆಗೆದಿಲ್ಲ ಎಂದರೆ ಸರಿಯಲ್ಲ ಪೊಲೀಸರು ಸ್ಥಳಕ್ಕೆ ಬಂದಿಲ್ಲ ಮತ್ತು ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ ನಾನು ಚಾಸಾ-1 ರವರ ಜೊತೆಗೆ ಅನ್ಯೋನ್ಯವಾಗಿದ್ದರಿಂದ ಅವರ ಸಹಾಯ ಮಾಡುವ ಉದ್ದೇಶದಿಂದ ಮತ್ತು ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹೊನ್ನಾಳಿ.